# ಟೊರೆಂಟೋದಲ್ಲಿ ಯಕ್ಷಮಿತ್ರ

**ಅಮೆರಿಕ, ಕೆನಡಾದ ವಿವಿಧ ಪ್ರಾಂತ್ಯಗಳಲ್ಲಿ ಕನ್ನಡದ ಶ್ರೀಮಂತ ಕಲೆಯಾದ ಯಕ್ಷಗಾನದ ಪರಿಮಳವನ್ನು ಈ ತಂಡ ಯಶಸ್ವಿಯಾಗಿ ಪ್ರಸಾರ ಮಾಡುತ್ತಿದೆ.**

★ ಕಡ್ಕೆ ರಾಮ ಅವಭೃತ



ಸತ್ಯವತಿ ಪ್ರಸಂಗದ ಒಂದು ದೃಶ್ಯ

ಕೆನಡಾದ ಒಂಟೇರಿಯೋ ರಾಜ್ಯದ ರಾಜಧಾನಿ ಟೊರೆಂಟೊ ನಗರದ ಮಿಸ್ಸಿಸ್ಸಾಗದಲ್ಲಿ ಮಗಳ ಮನೆಗೆ ಹೋಗಿದ್ದಾಗ ಅಲ್ಲಿ ಕೆಲವು ಯಕ್ಷಗಾನದ ಸಿ.ಡಿ ಗಳಿದ್ದವು. ಹಾಕಿ ನೋಡಿದರೆ ಟೊರೆಂಟೋದಲ್ಲೇ ಕನ್ನಡಿಗರು ಹಲವರು ಯಕ್ಷ ತಂಡವೊಂದನ್ನು ಕಟ್ಟಿ ಯಕ್ಷಗಾನ ಆಡಿಸುತ್ತಿರುವ ಸಂಗತಿ ಗೊತ್ತಾಯಿತು. ಆ ಕೂಟದ ಹೆಸರೇ ಯಕ್ಷಮಿತ್ರ.

ಯಕ್ಷಮಿತ್ರ ಹುಟ್ಟಿದ್ದೂ ಕುತೂಹಲಕರ ಸಂಗತಿಯೇ. ಟೊರೆಂಟೋದ ಕನ್ನಡ ಸಂಘ ತುಂಬ ಚಟುವಟಿಕೆಯಿಂದ ಕೆಲಸ ಮಾಡುತ್ತಿದೆ. ಸುಮಾರು ಒಂದು ಸಾವಿರ ಮಂದಿ ಸದಸ್ಯರಿದ್ದಾರಂತೆ. ಅವರಲ್ಲಿ ಕೆಲವರು ಹಬ್ಬ ಹರಿದಿನಗಳ ಸಂದರ್ಭದಲ್ಲಿ ಮನೆಯಲ್ಲಿ ಸೇರಿ ಸ್ನೇಹಕೂಟ ಏರ್ಪಡಿಸುತ್ತಿದ್ದರು. ಅದರಂತೆ ಒಬ್ಬರ ಮನೆಯಲ್ಲಿ 2008ರ ಹೊಸ ವರ್ಷದ ಆಚರಣೆ ನಡೆಯುತ್ತಿತ್ತು. ಅಲ್ಲಿ ಕೆಲವರು ಮನೆಯಲ್ಲೇ ಇರುವ ಸಾಮಗ್ರಿಗಳಿಂದ, ಪೆಟ್ಟಿಗೆ, ಚಮಚಗಳಿಂದ ಬಡಿದು ತಮ್ಮ ತಾಳಪ್ರತಿಭೆಯ ಕೈಚಳಕ ತೋರಿಸಿದರು. ಅವರಲ್ಲಿ ಕೆಲವರು ಭಾಗವತಿಕೆ, ಮದ್ದಳೆ, ಚಂಡೆ ವಾದನದಲ್ಲಿ ಅನುಭವ ಹೊಂದಿದವರೂ ಇದ್ದರು.

ಇಷ್ಟು ಜನ ವಿದ್ಯೆ ಗೊತ್ತಿರುವವರು ಇರುವಾಗ ಯಕ್ಷಗಾನ ತಂಡವೊಂದನ್ನು ಏಕೆ ಕಟ್ಟಿಕೊಳ್ಳಬಾರದು ಎಂದು ಆಲೋಚಿಸಿ, ಅಲ್ಲೇ ಹುಟ್ಟಿದ್ದು ಯಕ್ಷಮಿತ್ರ. ದೊಡ್ಡಮಾಣಿ ಡಾ. ಪರಮೇಶ್ವರ ಭಟ್ಟರ ನಿರ್ದೇಶಕತ್ವದಲ್ಲಿ 'ಯಕ್ಷಮಿತ್ರ ಟೊರೆಂಟೋ' ಜನ್ಮ ತಾಳಿತು. ಒಬ್ಬರು ಚಂಡೆಯನ್ನೂ, ಇನ್ನೊಬ್ಬರು ಮದ್ದಳೆಯನ್ನೂ, ಬೇರೊಬ್ಬರು ವೇಷ ಭೂಷಣ, ಮುಖ ವರ್ಣಿಕೆ ಮತ್ತು ಇತರ ಪರಿಕರಗಳನ್ನೂ ಊರಿನಿಂದ ತರಿಸಿದರು. ವೇಷ ಭೂಷಣ, ಮುಖವರ್ಣಿಕೆ ಮತ್ತು ಇತರ ಪರಿಕರಗಳನ್ನು ಒದಗಿಸುವಲ್ಲಿ ವಿಶೇಷ ಸಹಾಯ ನೀಡಿದವರು ಸಂಜಯ ಬಿಳಿಯೂರು. ವೃತ್ತಿಪರ ಮೇಳದಲ್ಲಿ ಅನುಭವ ಹೊಂದಿದ್ದ, ಟೊರೆಂಟೋದ ವಾಟರ್ಲೂನಲ್ಲಿ ಪ್ರೊಫೆಸರ್ ಆಗಿರುವ ಕಂಡಿಕ ನವೀನ ಹೆಗ್ಡೆ ನೇತೃತ್ವ ವಹಿಸಿದರು. ಯಕ್ಷಮಿತ್ರ ಸಂಘದಲ್ಲಿ ಭಾಗವತಿಗೆಯನ್ನು ಮಾಡುತ್ತಿರುವ ಕಲ್ಲಭಾಗ ವಿನಾಯಕ ಹೆಗ್ಡೆ ಅಭ್ಯಾಸಕ್ಕೆ ಮೊದಲು ಸ್ಥಳ ಒದಗಿಸಿದರು.



ಲವಕುಶ ಪ್ರಸಂಗದ ತಂಡ

ಏಪ್ರಿಲ್ 2009ರಲ್ಲಿ ಸಂಘದ ಚೊಚ್ಚಲ ಕಾಣಿಕೆ ಸ್ಯಮಂತಕೋಪಾಖ್ಯಾನ (ಜಾಂಬವತಿ ಕಲ್ಯಾಣ) ಕಥಾನಕವು ಆರು ಕಲಾವಿದರಿಂದ ಟೊರೊಂಟೊದಲ್ಲಿ ಯಶಸ್ವಿಯಾಗಿ ನಡೆಯಿತು.

ಅಮೆರಿಕದಲ್ಲಿ ನೆಲೆಸಿರುವ ಕಲಾವಿದರಾದ ಶಶಿಧರ ಸೋಮಯಾಜಿ, ರಾಜೇಂದ್ರ ಕೆದಿಲಾಯರನ್ನೂ ಅತಿಥಿ ಕಲಾವಿದರಾಗಿ ಕರೆಸಿ ಯಕ್ಷಗಾನ ಪ್ರದರ್ಶಿಸಿದ್ದಾರೆ. ಈಗಾಗಲೇ ಈ ಸಂಘದಿಂದ ಯಕ್ಷಗಾನದ ಸ್ಯಮಂತಕೋಪಾಖ್ಯಾನ (ಜಾಂಬವತಿ ಕಲ್ಯಾಣ), ಭೀಷ್ಮ ಪ್ರತಿಜ್ಞೆ, ಕೃಷ್ಣ ಸಂಧಾನ, ಲವ ಕುಶ, ಶ್ರೀ ರಾಮಾಂಜನೇಯ ಹಾಗೂ ಭಸ್ಮಾಸುರ ಮೋಹಿನಿ ಎನ್ನುವ ಆರು ಕಥಾನಕಗಳು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟು, ಕೆಲವು ಕಥಾನಕಗಳು ಚಿಕಾಗೋ, ಪಿಟ್ಸ್ ಬರ್ಗ್, ಬೋಸ್ಟನ್, ನ್ಯೂಜರ್ಸಿ ಮೊದಲಾದ ನಗರಗಳಲ್ಲಿಯೂ ಜಯಭೇರಿಯನ್ನು ಭಾರಿಸಿದೆ.

ಅಮೆರಿಕಾ ಮತ್ತು ಕೆನಡಾದಲ್ಲಿ ಯಕ್ಷಗಾನ ಕಲೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಸಮರ್ಥ ಹಿಮ್ಮೇಳ, ಮುಮ್ಮೇಳ ಹಾಗೂ ವೇಷಭೂಷಣ, ಪರಿಕರಗಳನ್ನು ಒಳಗೊಂಡ ಏಕೈಕ ತಂಡ ಎನ್ನುವ ಹೆಗ್ಗಳಿಕೆಗೆ 'ಯಕ್ಷಮಿತ್ರ' ಪಾತ್ರವಾಗಿದೆ. ಭಾಗವತರಾಗಿ ಕಲ್ಲಭಾಗ ವಿನಾಯಕ ಹೆಗ್ಡೆ, ಮದ್ದಳೆ ವಾದಕರಾಗಿ ಮರವಂತೆ ಶ್ರೀಧರ ಮಧ್ಯಸ್ಥ, ಚಂಡೆ ಮತ್ತು ಉಪಭಾಗವತರಾಗಿ ಕಟ್ಟಿನಕೆರೆ ರಾಘವೇಂದ್ರ ಈ ತಂಡದಲ್ಲಿ ಮುಂಚೂಣಿಯಲ್ಲಿದ್ದಾರೆ.

ಮುಮ್ಮೇಳದಲ್ಲಿ ದೊಡ್ಡಮಾಣಿ ಡಾ. ಪರಮೇಶ್ವರ ಭಟ್ಟ, ದೊಡ್ಡಮಾಣಿ ಶಾರದಾ ಭಟ್, ಕಂಡಿಕ ನವೀನ ಹೆಗ್ಡೆ, ವಾರನಕೆರೆ ಶ್ರೀಕಾಂತ ಹೆಗ್ಡೆ, ಎಲ್ಲೂರು ಕವಿರಾಜ ಉಡುಪ, ಎಲ್ಲೂರು ಬಿಂದು ಉಡುಪ, ಮರವಂತೆ ನಾಗಭೂಷಣ ಮಧ್ಯಸ್ಥ, ಹಳೆ ಕೊಪ್ಪ ಹರ್ಷ ಹೆಗ್ಡೆ, ಮಧುಸೂದನ ಭಟ್ ಗುಂಜಗೋಡು, ಅನಂತ ಕೃಷ್ಣ ಉಪಾಧ್ಯಾಯ ಕಂಬ್ಲೀಮೂಲೆ, ಕೃಷ್ಣಪ್ರಸಾದ ಬಾಳಿಕೆ, ಕುಮಾರಿ ಅನನ್ಯಾ ಬಾಳಿಕೆ ಮತ್ತು ಕರ್ಕಿ ನಿಮಿಷ ಹೆಗ್ಡೆ ತಂಡಕ್ಕೆ ಶಕ್ತಿ ತುಂಬಿದ್ದಾರೆ.

ಈ ವರ್ಷ ಟೊರೆಂಟೋದಲ್ಲಿ ಪ್ರದರ್ಶಿಸಲು 'ಸುಭದ್ರಾ ಕಲ್ಯಾಣ' ಪ್ರಸಂಗವನ್ನು ಸಿದ್ಧಪಡಿಸಿದ ತಂಡಕ್ಕೆ, ಆ ಪ್ರದರ್ಶನಕ್ಕೆ ಮೊದಲೇ ಅಮೆರಿಕದ ಕ್ಲೀವ್‌ಲ್ಯಾಂಡ್ ಮತ್ತು ಕೆನಡಾದ ಮಾಂಟ್ರಿಯಲ್ ನಿಂದ ಆಹ್ವಾನ ಬಂದಿದ್ದು ವಿಶೇಷ. ದೂರದೇಶದಲ್ಲಿ ನಮ್ಮ ಕಲೆಯ ಪರಿಮಳವನ್ನು ಯಾವುದೇ ಲಾಭದಾಸೆ ಇಲ್ಲದೆ ಹರಡುತ್ತಿರುವ ಯಕ್ಷಮಿತ್ರ ಸಾಹಸ ಮೆಚ್ಚಬೇಕಾದದ್ದೇ. ತಂಡವು ಯಕ್ಷಗಾನದ ಸಂಪ್ರದಾಯಗಳನ್ನು ಚಾಚೂತಪ್ಪದೆ ಪಾಲಿಸುತ್ತಿರುವುದೂ ಗಮನಾರ್ಹ. ಯಕ್ಷಗಾನ ಪದ್ಯದ ಭಾವಾರ್ಥ, ವಿವರಣೆಯನ್ನು ವೇದಿಕೆಯಲ್ಲಿ ಪರದೆಯ ಮೇಲೆ ಇಂಗ್ಲಿಷ್‌ನಲ್ಲಿ ತೋರಿಸುವ ವ್ಯವಸ್ಥೆಯಿಂದಾಗಿ ಅಲ್ಲೇ ಹುಟ್ಟಿದ ಇಂಗ್ಲಿಷ್ ಮಾತ್ರ ಬರುವ ಮಕ್ಕಳಿಗೂ ಕಲೆಯ ಆಸ್ವಾದ ಸುಲಭವಾಗುತ್ತಿದೆ.

ಟಿ.ವಿ, ಸಿನಿಮಾ ಮುಂತಾದ ಮನರಂಜನಾ ಮಾಧ್ಯಮಗಳ ಮುಂದೆ ನಮ್ಮ ನೃತ್ಯ, ಸಂಗೀತ, ಮಾತುಗಾರಿಕೆ ಮತ್ತು ನವರಸಗಳಿಂದ ಒಡಗೂಡಿದ ಶ್ರೀಮಂತ ಕಲೆ ಯಕ್ಷಗಾನ ವಿಜೃಂಭಿಸುತ್ತಿರುವುದು ಹೆಮ್ಮೆಯ ಸಂಗತಿ.